ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಹಂತ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregs@gmail.com

ಸಂ:ಗ್ರಾಅಪ:792: ಉಖಾಯೋ 2016 ದಿನಾಂಕ:28-09-2018

## ಅಧಿಸೂಚನೆ

**ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹುದ್ದೆ ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ.**

ಭಾರತ ಸರ್ಕಾರವು ಹೊರಡಿಸಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005, ದಿನಾಂಕ:07-09-2005 ಮತ್ತು ದಿನಾಂಕ:30-06-2011ರ ಸಾಮಾಜಿಕ ಪರಿಶೋಧನಾ ನಿಯಮಗಳು 2011 ರಡಿಯಲ್ಲಿ ಕರ್ನಾಟಕ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಗಳನ್ನು ರೂಪಿಸಿ ದಿ:10-01-2012 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಧಿಸೂಚನೆ ಸಂಖ್ಯೆ ಆರ್‌ಡಿಪಿಆರ್/186-(2)ಎಂ.ಜಿ.ಎನ್.ಆರ್.ಇ.ಜಿ.ಎ-2011ನ್ನು ಹೊರಡಿಸಲಾಗಿರುತ್ತದೆ. ಈ ಕಾಯ್ದೆ ಮತ್ತು ನಿಯಮಗಳನ್ವಯ ಸಾಮಾಜಿಕ ಪರಿಶೋಧನೆ ಅನುಷ್ಠಾನಗೊಳಿಸಲು ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸಲಾಗಿರುತ್ತದೆ, ಸದರಿ ಸಂಸ್ಥೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯನಿರ್ವಹಣೆಗಾಗಿ ನಿರ್ದೇಶಕರ ಒಂದು ಹುದ್ದೆಯನ್ನು ಸೃಜಿಸಲಾಗಿರುತ್ತದೆ.

ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಈ ಹುದ್ದೆಗಾಗಿ ಕೆಳಕಂಡ ನಿಬಂಧನೆಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ನೇಮಕಾತಿಯು 2 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತದ್ದಾಗಿರುತ್ತದೆ. ಅಖಿಲ ಭಾರತ ಸೇವೆಯ ಅಥವಾ ರಾಜ್ಯ ಸೇವೆಯ (ಕನಿಷ್ಠ ಆಯ್ಕೆ ಶ್ರೇಣಿಯ) ನಿವೃತ್ತ ಅಧಿಕಾರಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

### ಅ) ವಯಸ್ಸಿನ ಮತ್ತು ದೈಹಿಕ ಸಾಮರ್ಥ್ಯದ ಅರ್ಹತೆಗಳು:-

1) ಗರಿಷ್ಠ ವಯೋಮಿತಿ 63 ವರ್ಷದೊಳಗಿರತಕ್ಕದ್ದು.
2) ಅಭ್ಯರ್ಥಿಯು ಹುದ್ದೆಯ ಹೊಣೆಗಾರಿಕೆ ನಿರ್ವಹಿಸುವಷ್ಟು ದೈಹಿಕ ಸಾಮರ್ಥ್ಯ ಹೊಂದಿರತಕ್ಕದ್ದು, ದೈಹಿಕ ಸಾಮರ್ಥ್ಯದ ಧೃಡೀಕರಣ ಪತ್ರವನ್ನು ಸಲ್ಲಿಸುವುದು.

### ಆ) ಶೈಕ್ಷಣಿಕ ಅರ್ಹತೆಗಳು:-

1) ಕಂಪ್ಯೂಟರ್ ಬಳಕೆಯ ಸಾಮಾನ್ಯ ಜ್ಞಾನ ಅಪೇಕ್ಷಣೀಯ.
2) ಆಂಗ್ಲ ಮತ್ತು ಕನ್ನಡ ಭಾಷಾ ಜ್ಞಾನ ಹೊಂದಿರುವುದು.

ಪು.ತಿ.ನೋ

ಇ) ಅನುಭವದ ಅರ್ಹತೆಗಳು:-

1) ಅಖಿಲ ಭಾರತ ಸೇವೆಯ ನಿವೃತ್ತ ಅಧಿಕಾರಿ/ರಾಜ್ಯ ಸೇವೆಯ (ಕನಿಷ್ಠ ಆಯ್ಕೆ ಶ್ರೇಣಿಯ) ನಿವೃತ್ತ ಅಧಿಕಾರಿಯು ಕನಿಷ್ಠ 15 ವರ್ಷ ಅನುಭವ ಹೊಂದಿರುವುದು.

2) ಕಾರ್ಮಿಕರು, ರೈತರು, ಮಹಿಳೆಯರು ಗ್ರಾಮಸ್ಥರುಗಳ ಹಕ್ಕು, ಬಾದ್ಯತೆಗಳ ಹಾಗೂ ಅವುಗಳ ನಿರ್ವಹಣೆಗೆ ಹಾಗೂ ಸಾರ್ವಜನಿಕ ಸಹಭಾಗಿತ್ವದ ಕ್ಷೇತ್ರದಲ್ಲಿ ಕನಿಷ್ಠ 15 ವರ್ಷಗಳ ಅನುಭವ ಹೊಂದಿರುವುದು ಅಪೇಕ್ಷಣೀಯ.

ಈ) ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು:-

1) ಈ ಹುದ್ದೆಯು ಸರ್ಕಾರದ ಅಧಿಸೂಚನೆ ಸಂ:ಆರ್‌ಡಿಪಿಆರ್/186/(1)ಎಂಜಿಎನ್‌ಆರ್‌ಇಜಿಎ:2011 ಬೆಂಗಳೂರು, ದಿನಾಂಕ:10-01-2012ರ ಭಾಗ-3 (1) ರಂತೆ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಹೊಂದಿರುತ್ತದೆ.

2) ಸಾಮಾಜಿಕ ಪರಿಶೋಧನೆಯ ಮೂಲ ತತ್ವ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ನೀತಿಗೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಿಯಾ ಶೀಲರಾಗಿ ತೊಡಗಿಸಿಕೊಳ್ಳಲು ಬದ್ಧರಾಗಿರುವುದು.

3) ಆಯ್ಕೆಯಾದವರು ಸಾಮಾಜಿಕ ಪರಿಶೋಧನಾ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಲಸ ನಿರ್ವಹಿಸಬೇಕಾಗಿರುತ್ತದೆ. ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳಿಗೆ ಸಲಹಾ ಸೇವಾ ಒಪ್ಪಂದದನ್ವಯ ಕಾರ್ಯನಿರ್ವಹಿಸಲು ಬದ್ಧರಾಗಿರುವುದು.

ಉ) ಆಯ್ಕೆ ವಿಧಾನ:- ಪ್ರಕಟಣೆಯನುಸಾರ ಸ್ವೀಕೃತವಾಗುವ ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಅಭ್ಯರ್ಥಿ ಆಯ್ಕೆ ಮಾಡಲು ಮಂಡಿಸಲಾಗುವುದು.

ಊ) ಪ್ರಸ್ತುತ ನಿಗಧಿಪಡಿಸಲಾಗಿರುವ ಮಾಸಿಕ ಗೌರವ ಸಂಭಾವನೆ:-

ರೂ. 60,000/-ಗಳು (ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ನಿಯಮಾನುಸಾರ ಪ್ರವಾಸ ಭತ್ಯೆ ಮತ್ತು ಸಂಸ್ಥೆಯೊಂದಿಗಿನ ಒಪ್ಪಂದದಂತೆ ಇತರೆ ಸೌಕರ್ಯ/ಸೌಲಭ್ಯಗಳು.

ಸಾಮಾಜಿಕ ಪರಿಶೋಧನಾ ನಿರ್ದೇಶನಾಯದಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವೆಬ್‌ಸೈಟ್ www.rdpr.kar.nic.in/recruitment.aspನಲ್ಲಿ ಪಡೆಯಬಹುದಾಗಿದೆ. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ಪೂರಕ ದಾಖಲೆಗಳೊಂದಿಗೆ ಮೊಹರಾದ ಲಕೋಟೆಯಲ್ಲಿರಿಸಿ ದಿನಾಂಕ:16-10-2018 ರೊಳಗಾಗಿ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಹಂತ, 2ನೇ ಮಹಡಿ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ಖುದ್ದಾಗಿ/ಅಂಚೆ ಮೂಲಕ ತಲುಪುವಂತೆ ಸಲ್ಲಿಸುವುದು. ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು (ಆಡಳಿತ), ರವರನ್ನು ಮೊಬೈಲ್ ಸಂ: 7406388515 ರಲ್ಲಿ ಸಂಪರ್ಕಿಸಬಹುದಾಗಿದೆ.

M. Kanagavalli

(ಎಂ. ಕನಗವಲ್ಲಿ)

ಆಯುಕ್ತರು, ಗ್ರಾಮೀಣಾಭಿವೃದ್ಧಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮಗಾಂಧಿ ನರೇಗಾ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ
ನಿರ್ದೇಶಕರ ಹುದ್ದೆ ನೇಮಕಾತಿಗಾಗಿ ಅರ್ಜಿ ನಮೂನೆ:-

| | | | |
|---|---|---|---|
| 1 | ಅರ್ಜಿದಾರರ ಹೆಸರು | : | |
| 2 | ಜನ್ಮ ದಿನಾಂಕ ಮತ್ತು ವಯಸ್ಸು | : | |
| 3 | ಶೈಕ್ಷಣಿಕ ವಿದ್ಯಾರ್ಹತೆ (ಪದವಿ /ಸ್ನಾತಕೋತ್ತರ ಪದವಿ) | : | |
| 4 | ಅಂಚೆ ವಿಳಾಸ | : | |
| 5 | ಸ್ಥಿರ ದೂರವಾಣಿ/ ಮೊಬೈಲ್ ಸಂಖ್ಯೆ/ ಇ-ಮೇಲ್ ವಿಳಾಸ | : | |
| 6 | ದೈಹಿಕ ಸಾಮರ್ಥ್ಯ | : | |
| 7 | ಕಂಪ್ಯೂಟರ್ ಜ್ಞಾನ | : | |
| 8 | **ಅನುಭವದ ಅರ್ಹತೆಗಳು:-**<br>1) ಅಖಿಲ ಭಾರತ ಸೇವೆ ಅಥವಾ ರಾಜ್ಯ ನಾಗರೀಕ ಸೇವೆ (ಕನಿಷ್ಠ ಆಯ್ಕೆ ಶ್ರೇಣಿ) ಯಲ್ಲಿ ಸಲ್ಲಿಸಿರುವ ಸೇವಾ ಅವಧಿ.<br>2)ಸಾರ್ವಜನಿಕ ಆಡಳಿತ ಸೇವೆಯಲ್ಲಿ ಕಾರ್ಯನಿರ್ವಾಹಕ ಹುದ್ದೆಯಲ್ಲಿ ಸಲ್ಲಿಸಿರುವ ಸೇವಾ ವಿವರ | : | |

ಸ್ಥಳ :
ದಿನಾಂಕ:

ಅಭ್ಯರ್ಥಿಯ ಸಹಿ